ಮುಖ್ಯ ಶಿಕ್ಷಕರ ಹೆಚ್ ಟಿ ಎಫ್ ತರಬೇತಿ ವರದಿ. ದಿ: 15/10/2014

ರಾಜ್ಯ ಶಿಕ್ಷಣ ತರಬೇತಿ ಸಂಸ್ಥೆ ಬೆಂಗಳುರು ರವರು ನೀಡಿದ ಹೆಚ್ ಟಿ ಎಫ್ ತರಬೇತಿಯ ಎರಡನೆ ದಿನದ ವರದಿಯನ್ನು ಕೋಲಾರ ಜಿಲ್ಲೆಯ ತಂಡ ಸಿದ್ದಪಡಿಸಿ ನೀಡಿರುತ್ತಾರೆ.

ದಿನಂಕ; 15/10/2014 ರಂದು ಎರಡನೆ ದಿನದ ತರಬೇತಿ ಪ್ರಾರಂಭವಾಯಿತು ಮೊದಲಿಗೆ ಸಂಪನ್ಮೂಲ ವ್ಯಕ್ತಿ ರಾಕೇಶ್ ರವರು ಎಲ್ಲರನ್ನು ಸ್ವಾಗತಿಸುವ ಮೂಲಕ ದಿನದ ತರಬೇತಿಗೆ ಚಾಲನೆ ನೀಡಿದರು. ಮೊದಲಿಗೆ ಏಔಇಖ ಬಗ್ಗೆ ಮಾಹಿತಿ ನೀಡಿದರು ಅರ್ಥವಾಗದ ವಿಷಯವನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಪದೆ ಪದೆ ಹೇಳುತ್ತಾ ಗಣಕಯಂತ್ರದಲ್ಲಿ ಜಾಲ ತಾಣದಲ್ಲಿ ಇಂಜಡಿ ಬಳಸುವ ಬಗ್ಗೆ ತಿಲೀಸಿದರು ಎಲ್ಲಾ ಶಿಭಿರಾರ್ಥಿಗಳು ಅನುಸರಿಸಿದರು.

ಹೆಚ್ ಆರ ಎಂ ಎಸ್ ಮಾಹಿತಿ ಬಗ್ಗೆ ಆಯುಕ್ತಾಲಯದ ಸಹಾಯಕ ನಿರ್ದೇಶಕರಾದ ಶ್ರೀ ವೆಂಕಟೇಶ್ ರವರು ' ಹೆಚ್ ಆರ ಎಂ ಎಸ್ ಹಿನ್ನೆಲೆಯ ಬಗ್ಗೆ ತಿಳಿಸಿದರು . ಇದು 2003 ರಲ್ಲಿ ಹೆಚ್ ಆರ ಎಂ ಎಸ್ ಸಮಿತಿ ನೇಮಕವಾಯಿತು 2008 ರಲ್ಲಿ ಹೆಚ್ ಆರ ಎಂ ಎಸ್ ಪ್ರಾರಂಭವಾಯಿತು ಎಂದು ತಿಳಿಸಿದರು. ಎಲ್ಲಾ ಮುಖ್ಯ ಶಿಕ್ಷಕರು ಹೆಚ್ ಆರ ಎಂ ಎಸ್ ಮಾಹಿತ ಪಡೆದುಕೊಳ್ಳಬೇಕು ವೇತನ ವಿತರಣ ಅಧಿಕಾರಿಗಳಾಗಿದ್ದು ಸಂಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ; ಮುಖ್ಯ ಶಿಕ್ಷಕರು ತನ್ನ ಸಹ ಶಿಕ್ಷಕರ ಸೇವಾ ಪುಸ್ತಕವನ್ನು ಸಂಪೂರ್ಣವಾಗಿ ಹೆಚ್ ಆರ ಎಂ ಎಸ್ ನಲ್ಲಿ ಮಾಹಿತಿ ಭರ್ತಿ ಮಾಡಬೇಕು ಎಂದು ತಿಳಿಸಿದರು. ಮುಖ್ಯವಾಗಿ ನೌಕರರ ಹೆಸರು, ಲಿಂಗ, ಹುಟ್ಟಿದ ದಿನಾಂಕ, ಸೇವೆಗೆ ಸೇರಿದ ದಿನಾಂಕ ಕಾರ್ಯ ನಿರ್ವಹಿಸಿ ಸ್ಥಳಗಳನ್ನು ಕಡ್ಡಾಯವಾಗಿ ಪರಿಶೀಲಿಸಿ ಭರ್ತಿ ಮಾಡಬೇಕು ರಜೆ , ವೇತನ ಶ್ರೇಣಿ, ಮನೆ ಬಾಡಿಗೆ , ವಾರ್ಷಿಕ ಬಡ್ತಿ ಮುಂತಾದುವುಗಳನ್ನು ಪರಿಶೀಲಿಸಬೇಕು, ಯಾವುದೇ ನೌಕರನ ಸೇವಾಪುಸ್ತಕ ಮಾಹಿತಿ ಹೆಚ್ ಆರ ಎಂ ಎಸ್ ನಲ್ಲಿ ಪೂರ್ಣವಾಗಿ ನಮೂದಿಸದಿದ್ದರೆ ವೇತನ ದಲ್ಲಿ ತಂದರೆಗಳನ್ನು ಅನುಭವಿಸಬೇಕಾಗುತ್ತದೆ ಎಂದು ತಿಳಿಸಿದರು. ಮೊದಲನೆ ಅಧಿವೇಶನದಲ್ಲಿ ಚಹಾ ವಿರಾಮ ನೀಡಲಾಯಿತು.

ಎಚ್ ಟಿ ಎಫ್ ತರಬೇತಿಗೆ ಹಾಜರಾದ ಎಲ್ಲಾ ಎಂ ಆರ್ ಪಿ ಮುಖ್ಯ ಶಿಕ್ಷಕರು ತಮ್ಮ ವ್ಯಾಪ್ತಿಯ ಮುಖ್ಯ ಶಿಕ್ಷಕರಿಗೆ ಹೆಚ್ ಆರ ಎಂ ಎಸ್ ಬಳಕೆಯ ಮುನ್ನೆಚ್ಚರಿಕೆಯನ್ನು ತಿಳಿಸುವಂತೆ ತಿಳಿಸಿದರು . ಈ ಮಧ್ಯೆ ಅನೇಕ ಸಮಸ್ಯಗಳನ್ನು ಉದಾಹರಣೆ ಸಹಿತ ವಿವರಿಸಿದರು . ಮುಂದಿನ ತಿಂಗಳು ಈಗ ಹಾಜರಾದ ಎಲ್ಲ ಎಂ ಆರ ಪಿ ಗಳಿಗೆ ಮೂರು ದಿನಗಳ ತರಬೇತಿ ಇರುವುದಾಗಿ ತಿಳಿಸಿದರು. ಮದ್ಯಾಹ್ನದ ಅಊದಿ ಊಟದೊಂದಿಗೆ ಮುಕ್ತಾಯವಾಯಿತು.

ಊಟದ ಅವದಿಯ ನಂತರ ಅಧಿವೇಶನದಲ್ಲಿ ಸಂಪನ್ಮೂಲ ವ್ಯಕ್ತಿ ಶ್ರೀ ರಾಕೆಸ್ ರವರು ಎಂ ಎಸ್ ಆಫೀಸ್ ಬಳಕೆಯನ್ನು ಣಥಿಣಟಿಣಾ ನಲ್ಲಿ ಬಳಸುವ ಬಗ್ಗೆ ಮಾಹಿತಿ ನೀಡಿದರು. . ನಂತರ ತರಬೇತಿದಾರರು ಗಣಕಯಂತ್ರದಲ್ಲಿ ಎಂ ಎಸ್ ಆಫೀಸ್ ಬಳಸಿ ಪ್ರಾಯೋಗಿಕವಾಗಿ ಉಪಯೋಗಿಸುವುದನ್ನು ಎಚ್ ಟಿ ಎಫ್ ತರಬೇತಿಗೆ ಹಾಜರಾದ ಎಲ್ಲಾ ಎಂ ಆರ್ ಪಿ ಮುಖ್ಯ ಶಿಕ್ಷಕರು ಕಲಿತರು

ಚಹಾ ವಿರಾಮದ ನಂತರ ಸಂಪನ್ಮೂಲ ವ್ಯಕ್ತಿ ಶ್ರೀ ವೆಂಕಠೇಶ್ ರವರು ಎಕ್ಸಲ್ ಬಳಕೆ ಕುರಿತಂತೆ ಮಾಹಿತಿ ನೀಡಿದರು ವಿವಿದ ಸಂದರ್ಭಗಳಲ್ಲಿ ಎಕ್ಸೆಲ್ ಬಳಕೆಯನ್ನು ಪಟ್ಟಿ ಮಾಡಿಸಿದರು ವಿವದ ನಮೂನೆಗಳನ್ನು ಹೇಗೆ ಸಿದ್ದಪಡಿಸುವುದು ಎಂಬ ಬಗ್ಗೆಯೂ ತಿಳಿಸಿಕೊಟ್ಟರು .ಶಿಬಿರಾರ್ಥಿಗಳು ಸ್ವತಃ ಬಳಸಿ ಅನುಭವ ಪಡೆದುಕೊಂಡರು

ಸಮಯ ಹೋದದ್ದೆ ಗೊತ್ತಾಗಲಿಲ್ಲ ಸಂಜೆ 5.30 ರ ಸಮಯ ದಿನದ ತರಬೇತಿ ಮನೆಗೆಲಸದೊಂದಿಗೆ

ಪೂರ್ಣಗೊಂಡಿತ್ತು.

ಹೆ ಟಿ ಎಫ್ ತರಬೇತಿ ತಂಡ ಕೋಲಾರ ಜಿಲ್ಲೆ.